(SRI B. D. JATTI)

(*d*) No.

(*e*) Ragi ... 5,000 quintals.
Paddy ... 22,500 quintals.

———

Procurement of Paddy

*Q.—292. Sri S. BANGARAPPA (Sorab).—

Will the Minister for Food and Civil Supplies be pleased to state:—

(*a*) whether it is not a fact that force was used in Mugur and Padavagodu Villages in Sorab Constituency during the procurement of paddy though the Hon'ble Minister for Food made a statement that no force was used in compulsory paddy procurement ;

(*b*) if so, whether instructions would be issued immediately to the concerned Officers not to use force for procuring paddy ?

A.—Sri B. D. JATTI (Minister for Food and Civil Supplies).—

(*a*) No.

(*b*) Does not arise in view of the reply to (*a*).

ಶ್ರೀ ಹಂಜಿ ಶಿವಪ್ಪ.—ಎಷ್ಟೋ ಕಡೆಗಳಲ್ಲಿ ಸೊಸೈಟಿಗಳಲ್ಲಿ ಆಹಾರ ಪದಾರ್ಥಗಳು ಹುಳಿತು ಹೋಗಲಿಕ್ಕೆ ಅನ್ನದ ಕೊಟ್ಟಿರುತ್ತಾರೆ. ಆ ರೀತಿ ಅವಕಾಶ ಕೊಡದ ಹಾಗೆ ಅಲ್ಲಿಯ ಅಧಿಕಾರಿಗಳು ಆ ಆಹಾರ ಪದಾರ್ಥಗಳನ್ನು ಕೂಡಲೇ ಉಪಯೋಗಿಸುವುದಕ್ಕೆ ಪರ್ಮಿಟ್ ಕೊಟ್ಟು ಅಥವಾ ಜನಗಳು ಉಪಯೋಗಿಸಲಿಕ್ಕೆ ಅನುಕೂಲ ಮಾಡಿಕೊಡಬೇಕು. ನಮ್ಮ ಊರಿನಲ್ಲಿ ಹುಳಿತು ಹೋಗಿರತಕ್ಕ ಸಂದರ್ಭ ಇದೆ, ಇದಕ್ಕೆ ಹೆಚ್ಚು ನಿಗಾ ತೆಗೆದುಕೊಳ್ಳದಿದ್ದರೆ ಬಹಳ ಅನ್ಯಾಯವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಅಂತಹ ಪರಿಸ್ಥಿತಿ ಬಹಳ ಕಡೆ ಆಗಿಲ್ಲ. ಎರಡು ಕಡೆ ಆಗಿತ್ತು. ತಕ್ಷಣ ಸರ್ಕಾರದವರು ಅದನ್ನು ನರ್ಚ್‌ಮಾಡಿಸಿ ಮಾರಾಟ ಮಾಡಲಿಕ್ಕೆ ವ್ಯವಸ್ಥೆ ಮಾಡಿದ್ದಾರೆ. ಮತ್ತೆರ್ನಾದರೂ ಆ ರೀತಿ ಆಗಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ರಾಗಿಗೆ ಗೊತ್ತುಮಾಡಿರತಕ್ಕಂಥ ಒಂದು ರೇಟು ಲೋಕರ್ ಮಾರ್ಕೆಟ್‌ಗಿಂತ ಬಹಳ ಕಡಿಮೆ ಇರುವುದರಿಂದ ರೈತರಿಗೆ ನಷ್ಟವಾಗುವುದಿಲ್ಲವೇ ? ಇದನ್ನು ತಾವು ಕೇಂದ್ರ ಸರ್ಕಾರದಲ್ಲಿ ಕನ್‌ಸಲ್ಟೇಷನ್ ಮಾಡಿದ್ದೇನೆ ಎಂದು ಹೇಳಿದ್ದೀರಿ, ಇದನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.— ಈಗಾಗಲೇ ಕೇಂದ್ರ ಸರ್ಕಾರದವರ ಜೊತೆಯಲ್ಲಿ ನಮಾಲೋಚನೆ ಮಾಡಿದ್ದೇನೆ, ಪುನಃ ನಮಾಲೋಚನೆ ಮಾಡಬಾರದೆಂದು ನಿರ್ಬಂಧ ಇಲ್ಲ, ಮಾಡಬಹುದು.—

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಲೆವಿ ಮತ್ತು ಫುಡ್ ಪ್ರೊಕ್ಯೂರ್‌ಮೆಂಟ್ ಆರ್ಡರ್ ಪ್ರಕಾರ ಭತ್ತ ಸಂಗ್ರಹಣೆಯನ್ನು ಸರ್ಕಾರದವರು ನಿರ್ವಹಿಸಿಕೊಳ್ಳುತ್ತಾ ಬಂದಿದ್ದಾರೆಯೇ ? ಇಲ್ಲವೇ ಕ್ಯೂಬಿಡರಾಗಿದೆಯೇ ?

Sri B. D. JATTI.— Foodgrains are collected by way of levy under the Essential Commodities Act and not under the Defence of India Rules. We have not stopped collecting the levy.

ಶ್ರೀ ಟಿ. ಆರ್. ಶಾಮಣ್ಣ.—ಈಗಾಗಲೇ ಬೆಂಗಳೂರು ನಗರದಲ್ಲಿ ಅನೇಕ ಸ್ಟಮ್‌ಗಳಲ್ಲಿ ಸಕ್ಕರೆ ಕೊಡುತ್ತಾ ಇಲ್ಲ. ಸಕ್ಕರೆ ಕಳ್ಳಸಂತೆಯಲ್ಲಿ ವ್ಯಾಪಾರಕ್ಕೆ ಹೋಗುತ್ತಾ ಇದೆ ಎನ್ನುವ ದೂರು ಬಂದಿದೆ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೇ ?

ಶ್ರೀ ಬಿ. ಡಿ. ಜತ್ತಿ.—ಈ ರೀತಿ ಏನಾದರೂ ಸ್ಪಷ್ಟವಾದ ದೂರು ಬಂದಾಗ ನನ್ನ ಕಡೆ ಹೇಳಿ ದ್ದೀರಿ. ನಾನು ಅನೇಕ ಸಲ ಕೇಳಿದ್ದೇನೆ. ನೀವು ಈಗಲೂ ಅದನ್ನು ಕಳುಹಿಸಿಕೊಟ್ಟರೆ ಎನ್‌ಕ್ವೈರಿ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಎ. ಜನ್ನೇಗೌಡ.—ರೆವಿ ಅರ್ಡರ್ ಪ್ರಕಾರ ಪ್ರತಿ ತಿಂಗಳು 3ನೇ ತಾರೀಕು ಡಿಕ್ಲೇರ್ ಮಾಡಬೇಕು ಎಂದು ನಮೂದಿಸಿದೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ, ಅಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಅವರು ಹೇಳುವ ಮಾತು ಕೆಲವು ಮಟ್ಟಿಗೆ ನಿಜ ಇದೆ. ಏಕೆಂದರೆ ಡಿಕ್ಲೇರೇಷನ್ ಮಾಡಬೇಕಾಗಿದ್ದರೆ ಓದಲಿಕ್ಕೆ, ಬರೆಯಲಿಕ್ಕೆ ಬರದೇ ಇದ್ದರೆ ರೈತರಿಗೆ ಕಷ್ಟವಾಗುತ್ತದೆ. ವರ್ತಕರಿಗೆ ಓದುಬರಹ ಬರುತ್ತದೆ ವ್ಯವಹಾರ ಮಾಡಬಲ್ಲರು. ಅದರಲ್ಲಿ ಏನಾದರೂ ತೊಂದರೆ ಕಂಡುಬಂದರೆ ಪರಿಶೀಲನೆ ಮಾಡುತ್ತೇನೆ.

Sri DIGAMBAR RAO BALWANT RAO.—Is it a fact that Belgaum City has not received supply of sugar ?

Sri B. D. JATTI.—The hon' Member has received some information from Kolhapur District where sugar factories are located and we are to get quota from Kolhapur sugar factories and the factory owners there are urging the Government of Maharashtra who are discussing with the Government of India that the price of sugar should be raised to the level of purchase price in North India. We are getting our quota from the sugarfactories in Maharashtra.

ಶ್ರೀ ಎ. ಆರ್. ಪಂಚಗಾವಿ.—ಅನೇಕ ಕಡೆಗಳಲ್ಲಿ ಡಿಕ್ಲೇರೇಷನ್ ಫಾರಂ ಸಿಕ್ಕುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಉದಾಹರಣೆಗೆ ರಾಮದುರ್ಗ ತಾಲ್ಲೂಕು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ರಾಮದುರ್ಗ ತಾಲ್ಲೂಕಿನಲ್ಲಿ ಡಿಕ್ಲೇರೇಷನ್ ಫಾರಂ ಇರುವುದಿಲ್ಲ ಎಂದು ಈವೊತ್ತು ಹೇಳಿದ್ದೀರಿ ಅದನ್ನು ಎನ್‌ಕ್ವೈರಿ ಮಾಡಿ ನಾಳೆಯೇ ಸಾಕಷ್ಟು ಫಾರಂಗಳನ್ನು ಕಳುಹಿಸಿಕೊಡುವ ಏರ್ಪಾಡು ಮಾಡುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—ರೈತರ ದೃಷ್ಟಿಯಿಂದ ಇದು ಸಾಧುವಾಗಿದೆ. ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳುವುದಕ್ಕೂ ಇಲ್ಲಿ ಸರ್ಕಾರಕ್ಕೆ ಮಾರಾಟ ಮಾಡುವುದಕ್ಕೂ ಅಂತರ ಇದೆ, ಅದು ದರಿಂದ ಸರ್ಕಾರ ಕೊಡುವ ರೇಟು ಮಾರ್ಕೆಟ್ ರೇಟಿಗೆ ಅನ್ಯಾಯವಾಗಿರುವುದರಿಂದ ಇದನ್ನು ಸಬ್ಸಿಡೈಸ್‌ರೇಟ್ ಮಾಡಿ ಸರ್ಕಾರ ಹೆಚ್ಚು ರೇಟಿನಲ್ಲಿ ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri B. D. JATTI.—The levy that is collected varies between 1½ and 8 per cent of the total produce in the State. If the hon. Members feel that the purchase price is not sufficient, we are prepared to consult the Government of India again in regard to price increase.

Sri BAPU GOWDA.—Is it a fact that the individual cultivators after declaring their stocks and giving their levy are being permitted to sell their foodgrains out of the district ?

Sri B. D. JATTI—Sir, there is no ban for the movement of foodgrains. If the farmers pay the levy and show the receipt for having paid the levy, nobody prevents them in taking foodgrains in the entire State of Mysore.

ಶ್ರೀ ಎಂ. ಎಸ್. ಕೃಷ್ಣನ್.—ಬ್ಲಾಕ್‌ಮಾರ್ಕೆಟ್ ಮಾಡತಕ್ಕವರಿಗೆ ಉಗ್ರ ಶಿಕ್ಷೆ ವಿಧಿಸರಾಗುವುದು ಎಂಬ ವಿಚಾರವನ್ನು ತಿಳಿಸುತ್ತಾ, ಅಂಗಡಿಗಳಲ್ಲಿ ಮತ್ತು ರಾರಿಗಳಲ್ಲಿ ಅಕ್ರಮವಾಗಿ ಇಡತಕ್ಕ ಪ್ರಸಂಗಗಳು ಗಮನಕ್ಕೆ ಬಂದಾಗ ಅವರ ಬಗ್ಗೆ ಉಗ್ರಕ್ರಮ ಕೈಗೊಂಡು ಅದನ್ನು ತಡೆಗಟ್ಟಲಾಗುತ್ತದೆಂದು ಹೇಳಿದ್ದರಲ್ಲಿ 118 ಜನರಿಗೆ ಸಸ್‌ಪೆಂಡ್ ಮಾಡಿ ಫೈನು ಹಾಕಲಾಗಿದೆ. ಇದೇನೇ ಆ ಉಗ್ರಶಿಕ್ಷೆಯೋ ಅಥವಾ ಇದಕ್ಕೂ ಉಗ್ರಶಿಕ್ಷೆ ಇವೆಯೋ ? ಈ ದಿವಸ ಬೆಳಗ್ಗೆ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರದವರು ಬಗ್ಗೆ ಇವರ ಇನ್ನೂ ಹೆಚ್ಚಿನ ಉಗ್ರಕ್ರಮಗಳು ಆಗತ್ಯವೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರದವರ ನಿಲುವೇನು ಎಂಬುದನ್ನು ತಿಳಿಸುವಿರಾ ?

Sri B. D. JATTI.—The punishment varies according to the gravity of the offence committed. It cannot be uniform.

Sri BAPU GOWDA.—Is the Government aware that there are certain instances where the police have seized the lorries of those cultivators who have declared their stocks and given their levies and wh were taking their paddy for sale out of the district ?

Sri B. D. JATTI.—It is not possible to attach the goods of such farmers who are carrying their goods in lorries if they have paid levies. On the other hand, there are instances where in the name of farmers. some merchants collect foodgrains in the name of five or six farmers and they keep their receipts in their hands, but really they do not belong to the farmers, but they belong to merchants. In such cases, the police have acted properly.

Mr SPEAKER.—Sri Siddaveerappa was saying that all the time is spent on one question.

AN HON'BLE MEMBER.— In this case three questions are combined.

Sri H. SIDDAVEERAPPA.—The food problem is all important. Even if today's discussion is not sufficient, half-an-hour or two hours discussion may be taken up during this session itself, Sir.

Mr. SPEAKER.—I will tell you what has been passing in my mind. Most of these are in the nature of clarifications. But I am spending the rest of the time on this question which relates to food.

ಶ್ರೀ ಕೆ. ಎಚ್. ರಂಗನಾಥ್.—ಬೆಂಗಳೂರು ನಗರದಲ್ಲಿ ತಲಾ ಯಾವ ಪ್ರಮಾಣದಲ್ಲಿ ಸಕ್ಕರೆ ಕೊಡಬೇಕೆಂದು ನಿಗದಿ ಮಾಡಿದ್ದೀರಿ ; ಮತ್ತು ಏನಾದರೂ ಪರಮಾವಧಿ ನಿಗದಿ ಮಾಡಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಬೆಂಗಳೂರು ಪಟ್ಟಣದಲ್ಲಿ ಒಂದು ಯೂನಿಟು ಎಂದರೆ, ಮಕ್ಕಳಿಗೆ ಆರು ವರ್ಷಕ್ಕಿಂತ ಕಡಿಮೆ ಇರುವವರಿಗೆ 250 ಗ್ರಾಮ್ಸ್ ಕೊಡಬೇಕೆಂದೂ, ದೊಡ್ಡವರಿಗೆ 500 ಗ್ರಾಮ್ಸ್ ಕೊಡಬೇಕೆಂದೂ ಮಾಡಿದ್ದೇವೆ. ಯಿನಿಮಮ್ ಒಂದು ಕಾರ್ಡಿಗೆ ಒಂದು ಕೆ.ಜಿ. ಕೊಡಬೇಕೆಂದು ಮಾಡಿದ್ದೇವೆ. ಯೂನಿಟ್ ಪೈಸ್ ಪ್ರಕಾರ ಮ್ಯಾಕ್ಸಿಮಂ ಎಷ್ಟು ಜನ ಇದ್ದರೂ ಐದು ಕೆ.ಜಿ. ಸಕ್ಕರೆ ಕೊಡಬೇಕೆಂದು ಮಾಡಿದ್ದೇವೆ. ಜುಲೈ ತಿಂಗಳೊಳಗೆ ದೊಡ್ಡ ದೊಡ್ಡ ಬಲ್ಕ್ ಕನ್ಸ್ಯೂಮರ್ಸಿಗೆ ಕಟ್ ಮಾಡುವುದರಿಂದ, ಇನ್ನೂ ಅರ್ಧ ಕೆ.ಜಿ. ಜಾಸ್ತಿ ಪ್ರತಿ ಕಾರ್ಡಿಗೆ ಕೊಡಬೇಕೆಂದು ಇಷ್ಟರಲ್ಲೇ ತೀರ್ಮಾನ ಕೈಗೊಳ್ಳಲಿದೆ.

ಶ್ರೀ ಇ. ನಾರಾಯಣಗೌಡ.—ಈಗ ನಿಗದಿ ಮಾಡಿರತಕ್ಕ ರಾಗಿ ಮತ್ತು ಭತ್ತದ ಬೆಲೆ ಆಕರ್ಷಣೀಯವಾಗಿಲ್ಲವಾದ ಕಾರಣ ಅನೇಕ ರೈತರು ಕಮರ್ಶಿಯಲ್ ಕ್ರಾಪ್ ಬೆಳೆಯುತ್ತಿದ್ದಾರೆ. ಆದ್ದರಿಂದ ತಾವು ಮತ್ತೆ ಕೇಂದ್ರ ಸರ್ಕಾರದೊಡನೆ ಹೆಚ್ಚಿಗೆ ಬೆಲೆ ಮಾಡಬೇಕೆಂದು ಕೇಳಿ ; ಈ ದರಗಳನ್ನು ಪುನರ್ವಿಮರ್ಶಿಸುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ಹೇಳಿದೆ, ರೈತನು ಬೆಳೆದಂತಹ ಒಟ್ಟು ಆಹಾರದೊಳಗೆ 100 ಕ್ವಿಂಟಲ್‌ನಲ್ಲಿ ಎಂಟು ಕ್ವಿಂಟಾಲ್ ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲಿ 92 ಕ್ವಿಂಟಲ್ ಉಳಿಯುತ್ತಿದೆ.

ಅದ್ದರಿಂದ ಅವರು ಅವನ್ನು ಮನೆಯೊಳಗೂ ಉಪಯೋಗಿಸಿಕೊಂಡು 50 ಕ್ವಿಂಟಲ್ ಬೇಕಾದರೂ ಹೆಚ್ಚು ಬೆಲೆಗೆ ಮಾರಾಟ ಮಾಡುವಂತಹ ವ್ಯವಸ್ಥೆ ಇದೆ. ಈ ಪದ್ಧತಿ ಬಹಳ ಹಿತಕರವಾಗಿದೆ ಎಂದು ನನ್ನ ಕಲ್ಪನೆ.

ಶ್ರೀ ಬಿ. ರಘುರಾಮ ಶೆಟ್ಟಿ.—ನರ್ಕಾರದ ಅಗ್ರಿಕಲ್ಚರರ್ ಫಾರಂನಲ್ಲಿ ಒಂದು ಕ್ವಿಂಟಲ್ ಭತ್ತ ಬೆಳೆಯುವುದಕ್ಕೆ ಆವರೇಜ್ ಎಷ್ಟು ಕಾಸ್ಟ್ ಬೀಳುತ್ತದೆಂದು. ದಯವಿಟ್ಟು ಹೇಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅದನ್ನು ತರಿಸಿ ಕೊಡಬಹುದು. ನರ್ಕಾರಿ ಫಾರ್ಮ್ ಇದೆ, ಅಕೌಂಟ್ ಇದೆ. ಕೊಡಬಹುದು.

ಶ್ರೀ ಬಿ. ರಘುರಾಮ ಶೆಟ್ಟಿ.—ಒಂದು ಕ್ವಿಂಟರ್ ಭತ್ತ ಬೀಜಕ್ಕೆ ನರ್ಕಾರಿ ರೇಟ್ಕದಿಂದ ಕೊಡುವಾಗ ಎಷ್ಟು ಕ್ರಯವಾಗುತ್ತದೆ, ಹೇಳುತ್ತೀರಾ ?

Sri B. D. JATTI.—According to my information, there is separate price for seeds. If it is hybrid, then the price is fixed by the Agriculture Department; if it is normal seed, no separate price is fixed.

Sri C. K. RAJAIAH SETTY.—Is it not a fact that more sugar is allotted to Madras State than Mysore?

Sri B. D. JATTI.—Government of India will not discriminate between State and State. The information of the hon'ble member is not correct.

ಶ್ರೀ ಚಿಕ್ಕೇಗೌಡ.—ರೈತರು ತಾವು ಬೆಳೆದ ಬೆಳೆಯ ಬಗ್ಗೆ ಪ್ರತಿ ತಿಂಗಳ ಮೂರನೆ ವಾರದಲ್ಲಿ ಡಿಕ್ಲರೇಷನ್ ಕೊಡಬೇಕೆಂದು ನರ್ಕಾರದ ಆಜ್ಞೆ ಇದೆ. ಕೆಲವರು ತಮ್ಮನ್ಪಂತಕ್ಕಾಗಿ ಆಹಾರಧಾನ್ಯವನ್ನು ದಾಸ್ತಾನು ಮಾಡಿಕೊಂಡಿರುತ್ತಾರೆ. ಅಂತಹವರಿಗೆ ಪೋಲೀಸಿನವರು ಅನಾವಶ್ಯಕವಾಗಿ ತೊಂದರೆ ಕೊಟ್ಟು, ಅವರು ಡಿಕ್ಲರೇಷನ್ ಕೊಟ್ಟಿಲ್ಲವೆಂದು ಕೇಸ್‌ಗಳನ್ನು ಹಾಕಿದ್ದಾರೆ. ನರ್ಕಾರದವರು ಇಂತಹ ವಿಚಾರದಲ್ಲಿ ಪರಿಶೀಲನೆ ಮಾಡಿಸಿ ಅಂತಹಕೇಸುಗಳನ್ನು ವಜಾ ಮಾಡಿಸುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳುವುದು ಆಹಾರ ಇಲಾಖೆಗೆ ಸಂಬಂಧಪಟ್ಟಿದ್ದಲ್ಲ. ರಾ-ಡಿಪಾರ್ಟ್‌ಮೆಂಟ್‌ನವರು ಏನಾದರು ಒಪ್ಪಿದರೆ, ಹೋಂ ಡಿಪಾರ್ಟ್‌ಮೆಂಟ್‌ನವರು ವಾಪಸ್ ತೆಗೆದುಕೊಳ್ಳುತ್ತಾರೆ.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ಆಹಾರಧಾನ್ಯಗಳಲ್ಲಿ ನರ್‌ಪ್ಲಸ್ ಅಲ್ಲವೆಂದು ಹೇಳಿದ್ದೀರಿ. ಬೆಂಗಳೂರಿಗೆ 30 ಸಾವಿರ ಕ್ವಿಂಟಾಲ್ ಅಕ್ಕಿ ಬೇಕಾಗುತ್ತದೆಂದು ಹೇಳಿದಿರಿ, 30 ಸಾವಿರ ಕ್ವಿಂಟಾಲ್ ವಸೂಲಾದ ಮೇಲೆ, ಲೆವಿ ವಸೂಲು ಮಾಡುವುದನ್ನು ನಿಲ್ಲಿಸುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಇಷ್ಟು ವಸೂಲಾಗುತ್ತದೆಂದು ಒಂದು ಟಾರ್‌ಗೆಟ್ ಮಾಡಿರುತ್ತೇವೆ. ಅಷ್ಟು ವಸೂಲಾಗುವುದಿಲ್ಲ. ಕಡಿಮೆ ವಸೂಲಾಗುತ್ತದೆ.

ಶ್ರೀ ಎಸ್. ಎ. ಅಗ್ನಿಹೋತ್ರಿ.—ಯಾರಾದರೂ ಮಂತ್ರಿಗಳಾಗಲೀ ಅಥವಾ ಉಪಮಂತ್ರಿಗಳಾಗಲಿ ತಮಗೆ ಸಿಗುವ ನಕ್ಕರೆ ಪ್ರಮಾಣ ಸಾಲದೆಂದು ನರ್ಕಾರಕ್ಕೆ ಅರಿಕೆ ಮಾಡಿಕೊಂಡಿದಾರೆಯೇ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೆ ಮಂತ್ರಿಗಾಗಲೀ, ಉಪ ಮಂತ್ರಿಗಳಾಗಲೀ ಆ ರೀತಿ ನರ್ಕಾರಕ್ಕೆ ಕೇಳಿಕೊಂಡಿಲ್ಲ. ತಮಗೆ ಸಿಗುವ ಪ್ರಮಾಣ ಸಾಲದೆಂದು ಹೇಳುತ್ತಾರೆ.

ಶ್ರೀ ಕೆ. ಎನ್. ವೀರಪ್ಪಗೌಡ.—ನರಸಿಂಹರಾಜಪುರದಲ್ಲಿ ಜನರು ತಮ್ಮ ಊಟಕ್ಕೆ ಇಟ್ಟುಕೊಂಡಿರುವ ಅಕ್ಕಿಯನ್ನು ಕಡ್ಡಾಯವಾಗಿ ವಸೂಲು ಮಾಡಿರುವುದು ನರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ಡಿ. ಜತ್ತಿ.—ಹೋದ ವರ್ಷದಂತೆ ಈ ವರ್ಷ ಕಡ್ಡಾಯವಾಗಿ ಲೆವಿಯನ್ನು ವಸೂಲು ಮಾಡಿಲ್ಲ. ಬತ್ತ, ಜೋಳ, ರಾಗಿ ತಮ್ಮಲ್ಲಿ ನಾಕಷ್ಟು ಇಲ್ಲವೆಂದು ಯಾರಾದರೂ ಹೇಳಿದರೆ, ಅವರಿಂದ ಕಡ್ಡಾಯವಾಗಿ ತೆಗೆದುಕೊಳ್ಳುವುದಿಲ್ಲ.

Sri G. CHANDRAKANTH.—Has it come to the notice of the Government that about 220 bags of wheat unfit for human consumption were supplied to a society in Bidar about a year back?

Sri B. D. JATTI.—About the supply of wheat, it has not been brought to my notice. An instance of supply of 1,800 quintals of milo was brought to my notice and we have issued instructions to send the total quantity to Bangalore where it will be used immediately. About what the hon'ble member has stated, I will enquire today and if it is correct I will take necessary action.

Sri P. B. NANDIHALI.—Where there are a great number of landless labourers in the villages, and when there are no shops of foodgrains and when those people cannot go to cities to purchase foodgrains, will the Government take action to supply foodgrains to them ?

Sri B. D. JATTI.—Even in the rural areas if there are certain pockets where the people do not get foodgrains, the Government will make necessary arrangement through the fair-price shops. If such areas are there, let the hon'ble member write to me. I am prepared to take action and supply foodgrains.

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ.—ಪಟ್ಟಣಗಳಲ್ಲಿ ಜನರಿಗೆ ಆಹಾರಧಾನ್ಯಗಳನ್ನು ವಿತರಣೆ ಮಾಡುವಂತೆ ಗ್ರಾಮಾಂತರಗಳಲ್ಲಿರುವ ಜನರಿಗೂ ಏತಕ್ಕೆ ಆಹಾರಧಾನ್ಯಗಳನ್ನು ವಿತರಣೆ ಮಾಡಬಾರದು ?

ಶ್ರೀ ಬಿ. ಡಿ. ಜತ್ತಿ.—ಬೆಂಗಳೂರು ನಗರದಲ್ಲಿ ಆಹಾಧಾನ್ಯ ಬೆಳೆಯುವ ಜನರು ಇಲ್ಲ. ಬೆಂಗಳೂರು ಜನರು ಅಂಗಡಿಗಳಲ್ಲಿ ಸರ್ಕಾರದವರು ಒದಗಿಸುವ ಆಹಾರವನ್ನು ಕೊಂಡುಕೊಳ್ಳಬೇಕು. ಆಹಾರಧಾನ್ಯ ಬೆಳೆಯುವುದು ಗ್ರಾಮಾಂತರಗಳಲ್ಲಿ. ಆದ್ದರಿಂದ ಬೆಂಗಳೂರು ಪಟ್ಟಣದಲ್ಲಿ ಅನೌಪಚಾರಿಕ ಪಡಿತರ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಡ್-ಹಾಕ್ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ತಾಲ್ಲೂಕ್ ಮಾರ್ಕೆಟಿಂಗ್ ಕೊ-ಆಪರೇಟೀವ್ ಸೊಸೈಟಿಯವರು ಚಿಕ್ಕಮಗಳೂರು ಮತ್ತು ಮೂಡಿಗೆರೆಗಳಲ್ಲಿ ಈಗ ಬತ್ತವನ್ನು ಶೇಖರಣೆ ಮಾಡುವಾಗ 76 ಕೆ.ಜಿ.ಯ ಪ್ರತಿಯೊಂದು ಚೀಲಕ್ಕೂ ಒಂದು ಕೆ.ಜಿ. ಜಾಸ್ತಿ ಕೊಡಬೇಕೆಂದು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೇನಾದರೂ ಸರ್ಕಾರದ ಆದೇಶವನ್ನು ಕೊಟ್ಟಿದ್ದೀರಾ ?

Sri B. D. JATTI.—When the paddy is procured through the Taluka Marketing Society, an agreement is entered into between the Society and the Government. According to the terms and conditions of the agreement they will have to act. In case if they act against the terms and conditions, action will have to be taken.

Sri MANICK RAO SHAM RAO.—Is it a fact that the officials of Food Department and the Police officials will take proper action in registering cases under the essential commodities Act and also in accordance with the quota allotted to them by the higher authorities ?

Sri B. D. JATTI.—They will act according to the rules and the Court will do justice.

ಶ್ರೀ ಎಂ. ಎಸ್. ನೀಲಕಂಠಸ್ವಾಮಿ.—ತುಮಕೂರು ಜಿಲ್ಲೆಯಲ್ಲಿ ಆಹಾರ ನರ್ಪ್ಲಸ್ ಇಲ್ಲ ವೆಂಬುದು ಗೊತ್ತಾಗಿದ್ದರೂ ಬೆಂಗಳೂರು ಸಬ್-ಡಿವಿಜನ್ ಆಫೀಸಿನಿಂದ ಆಹಾರ ಅಲ್ಲಗೆ ಬಹಳ ಕಡಿಮೆಯಾಗಿ ಸರಬರಾಜು ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ತುಮಕೂರು ಜಿಲ್ಲೆ ನರ್ಪ್ಲ ಸಾಮಾನ್ಯವಾಗಿ ಆಹಾರ ಕೊರತೆ ಪ್ರದೇಶ ವೆಂದು ಗೊತ್ತಿದೆ. ಜೇರೆ ಜೇರೆ ತಾಲ್ಲೂಕುಗಳಲ್ಲಿಯೂ ಆಹಾರ ಕೊರತೆ ಇರುವುದರಿಂದ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಡೈರಕ್ಟರ್ ಆಫ್ ಫುಡ್ ನಪ್ಲೈಸ್ ಅವರಿಗೆ ಆ ಬಗ್ಗೆ ವರದಿ ಮಾಡಿದರೆ ಎಷ್ಟು ಬೇಕೋ ಅಷ್ಟನ್ನೂ ಕೊಡುತ್ತೇವೆ.

Sri H. C. LINGA REDDY.—Has it come to the notice of the Government that the officials are procuring more foodgrains from the farmer than what is required according to procurement law?

Sri B. D. JATTI.—Such things may not happen. If the farmer gives the form duly filled in saying that he has already given or he is not due to give anything to Government, he is free not to give anything to Government.

ಶ್ರೀ ಬಿ. ಗಂಗಣ್ಣ.—ಈಗ ಆಹಾರದ ಬೆಲೆಗಳು ದಿನೆ ದಿನೇ ಏರುತ್ತಿರುವುದರಿಂದ ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚು ಹೆಚ್ಚಿಗೆ ಆಗಾಗ್ಗೆ ತುಟ್ಟಿಭತ್ಯವನ್ನು ಕೊಡುವ ಹಾಗೆ ಬೆಳೆ ಬೆಳೆಯುವ ರೈತರು ಉಪಯೋಗಿಸುವಂಥ ಗೊಬ್ಬರ, ಇತರ ವ್ಯವಸಾಯ ಸಲಕರಣೆಗಳ ಬೆಲೆ ಏರಿರುವುದರಿಂದ ಅದನ್ನು ಸರ್ಕಾರ ನಿಗದಿ ಮಾಡಿದ ದರದಲ್ಲಿ ಮಾರುವ ಹಾಗೆ ವ್ಯವಸ್ಥೆ ಮಾಡುತ್ತೀರಾ?

Sri B. D. JATTI.—Sir, it is a suggestion for action and this will be examined.

ಶ್ರೀ ಎಸ್. ಶರಣಗೌಡ.—ಮಾನ್ಯ ಸಚಿವರು ಗುಲ್ಬರ್ಗಾಕ್ಕೆ ದಯಮಾಡಿಸಿದಾಗ ನಮ್ಮ ಕಡೆ ಕಡಲೆ, ತೊಗರಿಬೇಳೆ ಜನಗಳಿಗೆ ಸಾಕಷ್ಟು ಸಿಗುವುದಿಲ್ಲವೆಂದು ಮನವಿ ಮಾಡಿದಾಗ ತಾವು ಉತ್ತರ ಪ್ರದೇಶದಿಂದ ಹಾಗೂ ರಾಜಸ್ಥಾನದಿಂದ ತರಿಸಲು ತೀವ್ರ ವ್ಯವಸ್ಥೆಮಾಡುತ್ತೇವೆ ಎಂಬುದಾಗಿ ಹೇಳಿದಿರಿ. ಇಲ್ಲಿಯವರೆಗೂ ಆ ವ್ಯವಸ್ಥೆ ಮಾಡಲಿಲ್ಲ, ಕಾರಣವೇನು?

ಶ್ರೀ ಬಿ. ಡಿ. ಜತ್ತಿ.—ವ್ಯವಸ್ಥೆ ಏನೋ ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಆ ಪ್ರದೇಶಗಳ ಸಂಬಂಧಪಟ್ಟ ಮಂತ್ರಿಗಳಿಗೂ ಹಾಗೂ ಕೇಂದ್ರ ಸರ್ಕಾರಕ್ಕೂ ಪತ್ರ ಬರೆದಿದ್ದಾರೆ. ಅಲ್ಲಿಂದ ನಾವು ಕಡಲೆ, ಕಡಲೆಬೇಳೆ ಮತ್ತು ತೊಗರಿಬೇಳೆಗಳನ್ನು ಕೊಂಡುಕೊಂಡು ಮಾರಲು ಏರ್ಪಾಡು ಮಾಡುತ್ತಿದ್ದೇವೆ. ಆ ಪದಾರ್ಥಗಳು ಇಲ್ಲಿಗೆ ಬಂದಮೇಲೆ ಗುಲ್ಬರ್ಗಾಕ್ಕೂ ಕಳುಹಿಸಿ ಕೊಡುತ್ತೇವೆ.

9-30 A. M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾರ್ಕೆಟ್‌ಬಿಲ್ ಸಪ್ಲೈಸ್ ಗೊತ್ತುಮಾಡುವುದು ಬೆಳೆದಿರತಕ್ಕಂಥಾದ್ದರ ಮೇಲೆ ಮಾಡುತ್ತೀರಾ ಅಥವಾ ತಾಲ್ಲೂಕ್ ಕಛೇರಿಯಲ್ಲಿ ಇರತಕ್ಕ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಇಷ್ಟು ಎಂದು ಅಂದಾಜಿನ ಮೇಲೆ ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಲೆವಿ ಗೊತ್ತು ಮಾಡುವುದು ಕಾನೂನು ಪ್ರಕಾರ ಬೆಳೆಯಮೇಲೆ.

ಒಬ್ಬ ಮಾನ್ಯ ಸದಸ್ಯರು.—ಓಪನ್ ಮಾರ್ಕೆಟ್ಟಿನಲ್ಲಿ ಕಾಳು ಕೊಳ್ಳುವ ವ್ಯವಸ್ಥೆ ಮಾಡಿದ್ದು ಇದರಲ್ಲಿ ಎಷ್ಟು ಕಾಳು ಕೊಂಡುಕೊಂಡಿದ್ದೀರಿ? ಮತ್ತು ಯಾವ ಧಾರಣೆಯಿಂದ ಕೊಂಡಿದೆ?

ಶ್ರೀ ಬಿ. ಡಿ. ಜತ್ತಿ.—ಭತ್ತ, ಅಕ್ಕಿ ಕೊಳ್ಳಬೇಕೆಂದು ಗೊತ್ತು ಮಾಡಿ ಫುಡ್ ಗ್ರೇನ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರಿಗೆ ಮೂರು ಜಿಲ್ಲೆಗಳಲ್ಲಿ ಅಂದರೆ ಮಂಡ್ಯ, ಶಿವಮೊಗ್ಗ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಕೊಟ್ಟಿದೆ. ರಾಯಚೂರು ಡಿಸ್ಟ್ರಿಕ್ಟ್ ಮತ್ತು ಬಳ್ಳಾರಿ ಡಿಸ್ಟ್ರಿಕ್ಟ್‌ನಲ್ಲಿ ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಕೊಂಡುಕೊಳ್ಳಬೇಕೆಂದು ಮಾಡಿದ್ದೇವೆ. ಮಾರ್ಕೆಟ್ ಸೊಸೈಟಿಯವರಿಗೆ ರೈಟ್ ಆಫ್ ಪ್ರಿಯಂಪ್ಶನ್ ಹಕ್ಕು ಕೊಟ್ಟಿದ್ದೇವೆ. ಈ ಹಕ್ಕು ಅವರು ಉಪಯೋಗ ಮಾಡಬಹುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಲೆವಿ ಕಲೆಕ್ಟ್ ಮಾಡತಕ್ಕಂಥ ಸಮಯದಲ್ಲಿ ಏನಾದರೂ ರೈತ ಸೆಪ್ಲಿಮೆಂಟ್ ಮಾಡುವುದಕ್ಕೆ ಬೆಳಕೊಂಡಿರುವುದನ್ನು ಮನೆ ಜಪ್ತಿಮಾಡಿ ತೆಗೆದುಕೊಳ್ಳುವುದು ತಮ್ಮ ಗಮನಕ್ಕೆ ಬಂದಿದೆಯೇ? ಆ ರೀತಿ ಆರ್ಡರ್ ಮಾಡಿದ್ದೀರಾ?

Sri B. D. JATTI.—Levy has to be collected on each crop.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ನಗರದಲ್ಲಿ ಮದುವೆ ಸಮಾರಂಭಕ್ಕೆ ಅಕ್ಕಿ ಕೊಡುವುದಿಲ್ಲ ಎಂದು ಕಾನೂನು ಏನಾದರೂ ಮಾಡಿದ್ದೀರಾ?

ಶ್ರೀ ಬಿ. ಡಿ. ಜತ್ತಿ.—ಸರಕಾರಕ್ಕೆ ಮಾನ್ಯ ಸದಸ್ಯರು ಮದುವೆ ಮಾಡಿಕೊಂಡದ್ದು ಗೊತ್ತಿಲ್ಲ. ಅವರ ಮದುವೆಗೆ ಕೊಟ್ಟೇ ಕೊಡುತ್ತೇವೆ.

ಶ್ರೀ ವಿಠ್ಠಲದಾಸ ಶೆಟ್ಟಿ.—ಮೈಸೂರು ಕೇರಳ ಬಾರ್ಡರಿನಲ್ಲಿ ಧಾನ್ಯ ಕಳ್ಳ ಸಾಗಾಣಿಕೆ ಮಾಡುತ್ತಿದ್ದುದನ್ನು ಪೋಲಿಸರು ಹಿಡಿದು ಹತ್ತಿಪ್ಪತ್ತು ಲಾರಿ ಧಾನ್ಯ ಪೋಲಿಸ್ ಸ್ವೇಷನ್ನಿನಲ್ಲಿ ಸ್ವಾಕಃ ಮಾಡಿದ್ದು ಹಾಳಾಗುತ್ತಿದೆ. ಅದನ್ನು ಸರಕಾರ ವಶ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಮಾಡಿದ್ದೇವೆ.

ಶ್ರೀ ಎ. ಮುನಿಯಪ್ಪ.—ಸ್ವಾಮಿ, ಲೆವಿ ವಸೂಲ್ಮಾಡುವುದರಲ್ಲಿ ಹಂಚಿಕೆ ಮಾಡುವುದರಲ್ಲಿ ಅಕ್ಷೇಪಣೆಗಳು ತೊಂದರೆಗಳು ಆಗುತ್ತಾ ಇವೆ. ಆದುದರಿಂದ ತಾಲ್ಲೂಕ ಮಟ್ಟದಲ್ಲಿ ಫುಡ್ ಸಲಹಾ ಸಮಿತಿಗಳನ್ನು ಮಾಡಿ ಅಧಿಕಾರಿಗಳನ್ನೂ ಮತ್ತು ಖಾಸಗಿಯವರನ್ನು ನೇಮಕ ಮಾಡೂವುದಕ್ಕೆ ಸರಕಾರದ ಅಭಿಪ್ರಾಯವೇನು ?

ಶ್ರೀ ಬಿ. ಡಿ. ಜತ್ತಿ.—ತಮ್ಮ ಸಲಹೆ ಬಗ್ಗೆ ಸರಕಾರ ಯೋಚನೆ ಮಾಡಬಹುದು.

Mr. SPEAKER.—I have made a new discovery : it is impossible to satisfy the requirements of food and the desire of the Members to put supplementaries.

ಶ್ರೀ ಎಸ್. ಗೋಪಾಲಗೌಡ.—ಸರಕಾರದವರು ನಮ್ಮ ರಾಜ್ಯದಲ್ಲಿ ಯಾವ ನಗರದಲ್ಲಿಯೂ ಸ್ಯಾಚ್ಯುಟರಿ ರೇಷನಿಂಗ್ ಜಾರಿಗೆ ತಂದಿಲ್ಲ. ಯಾವ ವರ್ಗದವರಿಗೂ ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯ ಒದಗಿಸಿಲ್ಲ. ತೀರ ಆರ್ಥಿಕ ಮಟ್ಟದಲ್ಲಿ ಹಿಂದುಳಿದ ವರ್ಗಕ್ಕೆ ಬೇಸಾಯ ಕೂಲಿ ಕಾರರಿಗೆ ಮಿಲ್ಲಿನಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ಆಹಾರ ಧಾನ್ಯ ಕಡಿಮೆ ದರದಲ್ಲಿ ಒದಗಿಸುವುದನ್ನು ಪರಿಶೀಲನೆ ಮಾಡುತ್ತೀರಾ ? ಕೇರಳ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಆಹಾರ ಧಾನ್ಯ ಸಬ್‌ಸಿಡೈಜ್ ಮಾಡಿ ಒದಗಿಸುತ್ತಾರೆ. ಅಂಥ ಕ್ರಮ ಇಲ್ಲಿಯೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ? ಬರುವ ನಾಲ್ಕು ತಿಂಗಳು ಕಷ್ಟವಿದೆ.

ಶ್ರೀ ಬಿ. ಡಿ. ಜತ್ತಿ.—ನಮ್ಮ ಪ್ರಾಂತದಲ್ಲಿ ಸ್ಯಾಚ್ಯೂಟರಿ ರೇಷನಿಂಗ್ ಇನ್‌ಜ್ಯೂರ್ಡ್ಯೂಸ್ ಮಾಡಿಲ್ಲ ಮತ್ತು ಮಾಡುವ ವಿಚಾರವು ಸರ್ಕಾರಕ್ಕೆ ಇಲ್ಲ. ಬೆಂಗಳೂರು ಪಟ್ಟಣ ಮತ್ತು ಕೋಲಾರದ ಚಿನ್ನನ ಗಣಿ ಪ್ರದೇಶ, ನಾನ್ ಮೈನಿಂಗ್ ಪ್ರದೇಶವು ಸೇರಿಕೊಂಡಂತೆ ಇನ್‌ಫಾರ್ಮರ್ ರೇಷನಿಂಗ್ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಕಾರ್ಖಾನೆಯಲ್ಲಿ ಕೆಲಸ ಮಾಡುವವರು, ಕೂಲಿಕಾರರು, ನೇಕಾರರು, ರೈಲುಪೆ ಇಲಾಖೆಯಲ್ಲಿ ಕೆಲಸ ಮಾಡುವ ಕೂಲಿಕಾರರು ಮತ್ತು ಇನ್ನಿತರ ಯಾವುದೇ ಕ್ಷೇತ್ರದಲ್ಲಿ ಆಹಾರಧಾನ್ಯಕ್ಕೆ ಸಾಕಷ್ಟು ತೊಂದರೆ ಇದೆ ಎಂದರೆ ಅಂಥವರಿಗೆ ಆಡ್-ಹಾಕ್ ಬೇಸಿಸ್ ಮೇಲೆ 5 ಕೆ. ಜಿ. 7 ಕೆ. ಜಿ. ಈ ರೀತಿ ಆಹಾರಧಾನ್ಯ ಒದಗಿಸುತ್ತಿದ್ದೇವೆ.

ಶ್ರೀ ಸುಬ್ಬರಾವ್ ಹಲನನಾಡ್.—ಕುಂದಾಪುರ ತಾಲ್ಲೂಕಿನಲ್ಲಿ ಲೆವಿಯನ್ನು ಮನೆ ಮನೆಗೆ ಹೋಗಿ ಬತ್ತವನ್ನು ಕಂಡಾಪಟ್ಟೆ ವಸೂಲು ಮಾಡಿದ್ದಾರೆ. ಈಗ ಮಳೆಗಾಲದಲ್ಲಿ ಮಳೆಗಾಲ ಕಳೆಯುವವರೆಗೂ ಜನರಿಗೆ ಅಕ್ಕಿಯ ತೊಂದರೆ ಇದೆ. ಆದುದರಿಂದ ಆಭಾಗದಲ್ಲಿ ರೇಷನಿಂಗ್ ಷಾಪ್ ತೆರೆಯುವ ಅಭಿಪ್ರಾಯವಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಲೆವಿ ವಸೂಲು ಮಾಡುವುದರಿಂದ ಆಹಾರ ಧಾನ್ಯವೆಲ್ಲಾ ಹೋಗುತ್ತದೆ ಎನ್ನುವ ಮಾತು ಸರಿಯಲ್ಲ. ಅಲ್ಲಿ ವಸೂಲ ಮಾಡಿದ ಮೇಲೆ ಆಹಾರ ಧಾನ್ಯಗಳ ಕೊರತೆ ಇದ್ದರೆ ನಾನು ಈಗಲೇ ಹೇಳಿದಂತೆ 5 ಕೆ. ಜಿ. ಪ್ರಕಾರ ಆಹಾರಧಾನ್ಯ ಕೊಡುವುದಕ್ಕೆ ಅವಕಾಶವಿದೆ. ಮಾನ್ಯ ಗೋಪಾಲ ಗೌಡರ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಒಂದು ವಿಷಯವನ್ನು ಹೇಳಬೇಕಾಗಿದೆ ಸಬ್ಸಿಡಿ ಇತರಕಡೆಗಳಲ್ಲಿ ಕೊಡುವಂತೆ ನಮ್ಮಲ್ಲಿಯೂ ಕೊಡಬೇಕೆಂದು ಕೇಳಿದರು. ನಮ್ಮ ಹಣಕಾಸಿನ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲ. ಅದರ ಸಲುವಾಗಿ ನಾವು ಈ ಇಲಾಖೆಯನ್ನು " ನೊ ಪ್ರಾಫಿಟ್ ನೋ ಲಾಸ್ " ಬೇಸಿಸ್ ಮೇಲೆ ನಡೆಸುತ್ತಿದ್ದೇವೆ. ಇನ್ನು ಮುಂದೆಯೂ ಅದೇ ರೀತಿ ನಡೆಸುತ್ತೇವೆ.

ಶ್ರೀ ಗಂಗಾಬೋವಿ.—ತಾಲ್ಲೂಕು ಬೋರ್ಡಿನಲ್ಲಿ ಮತ್ತು ಜಿಲ್ಲಾ ಕೌನ್ಸಿಲ್‌ನಲ್ಲಿ ನಿರ್ಣಯ ಮಾಡಿ ಲೆವಿ ವಸೂಲ್ಮಾಡಬಾರದೆಂದು ಸರ್ಕಾರಕ್ಕೆ ಕಳಿಸಿರುವುದು ತಮ್ಮ ಗಮನಕ್ಕೆ ಬಂದಿದೆ. ಕೆಲವು ಮಿಲ್ಲುಗಳನ್ನು ತಹಸೀಲ್ದಾರರು ಕಡ್ಡಾಯವಾಗಿ ಮುಚ್ಚಿ ಲೆವಿ ವಸೂಲ್ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಸರ್ಕಾರಿ ಅಧಿಕಾರಿಗಳು ಗಿರಣಿ ಮಾಲೀಕರ ಕಡೆಯಿಂದ ಅಕ್ಕಿಯನ್ನು ಲೆವಿಯಾಗಿ ವಸೂಲ್ಮಾಡುವುದಿಲ್ಲ. ಆದರೆ ರಿಕ್ವಿಜಿಷನ್ ಆರ್ಡ್ಲ್ ಪ್ರಕಾರ ಒಬ್ಬರಲ್ಲಿ ಎಷ್ಟು ದಾಸ್ತಾನು ಇರುತ್ತದೆ ಅದರಲ್ಲಿ ನೂರಕ್ಕೆ 50 ರಷ್ಟನ್ನು ತೆಗೆದುಕೊಳ್ಳುವ ಅಧಿಕಾರವಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮಂಗಳೂರು ಸದಸ್ಯರೊಬ್ಬರು ಪ್ರಶ್ನೆ ಕೇಳಿದಾಗ್ಗೆ ಸರ್ಕಾರ ದವರು ಕಳ್ಳ ಸಾಗಾಣಿಕೆಯುಲ್ಲಿ ಹೋಗುತ್ತಿದ್ದ ಅಕ್ಕಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ, ಮತ್ತು ಯಾವ ದಿನಾಂಕ ಈ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಬಿ. ಡಿ. ಜತ್ತಿ.—ಮಂಗಳೂರಿನಿಂದ ಕೇರಳಕ್ಕೆ ಹೋಗತಕ್ಕ ಅಕ್ಕಿ ಲಾರಿಗಳನ್ನು ಪೋಲೀಸರು ಹಿಡಿದಿದ್ದಾರೆ. ಆ ಅಕ್ಕಿಯನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ. ಇದಾಗಿ ಬಹಳ ದಿವಸವಾಗಿಲ್ಲ; 15 ದಿವಸದ ಒಳಗೇನೆ ಇದೆ. ಅದನ್ನು ಸರಿಯಾದ ಸ್ಥಳದಲ್ಲಿಟ್ಟು ಅದು ಕೆಡದಂತೆ ನೋಡಿಕೊಂಡಿದ್ದಾರೆ.

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಅಕ್ಕಿಯನ್ನು ಪೋಲೀಸು ಸ್ಟೇಷನ್ ಹೊರಗೆ ಅಂಗಳದಲ್ಲಿಟ್ಟಿದ್ದಾರೆ, ಅದರ ವಿಚಾರ ನೋಡಿಕೊಳ್ಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಆ ವಸ್ತುವಿನ್ನು ಡೆಪ್ಯುಟಿ ಕಮಿಷನರಿಗೆ ಕಳಿಸಿದಮೇಲೆ ಕಾನ್‌ಫಿಸ್ಕೇಷನ್ ಆರ್ಡರಾಗಬೇಕು. ಹಾಗೆ ಮಾಡುವಾಗ 'if he is reasonably convinced to confiscate, he can pass orders'. ಎಂಬ ಶಬ್ದಗಳಿವೆ. ಆ ರೀತಿ ಅವರು. ಒಂದೆರಡು ದಿವಸಗಳಲ್ಲಿ ಆರ್ಡರು ಮಾಡುತ್ತಾರೆ. ಅಲ್ಲಿಯವರೆಗೆ ಕೆಡದಂತೆ ನೋಡಿಕೊಂಡರೆ ಸರಕಾರ ವಶ ಪಡಿಸಿಕೊಳ್ಳುತ್ತದೆ.

Sri V. N. PATIL.—May I know the policy of the Government in purchasing Jawar at Rs. 53 per quintal and selling it at Rs.75 and above per quintal, and is it a legalised policy ?

Sri B. D. JATTI.—Government purchase Jawar and Paddy from the farmers from the villages. When we begin to collect levy, from that point till we distribute it to the last consumer, there are three stages. All persons dealing in all these three stages have to be paid ; nobody is prepared to work without any commission or remuneration. If we add all this expenditure, the total in the case of Jawar comes to Rs. 17 and in the case of Paddy it will work out to Rs. 20 or Rs. 21. So, there is no profit to the Government.

Mr. SPEAKER.—I have got a communication here, which I must read to the members :

> "Question Hour has turned out to be a debate on food problems. Some of the supplementaries put are unconnected with the Questions."

Question Hour is over.

Members' Representation

Sri L. SRIKANTAIAH.—Sir, what about my Question ?

Mr. SPEAKER.—The hon'ble member may please look into the rules.

Sri B. B. SAYANAK.—Sir, what about my Question ?

Mr. SPEAKER.—Everybody's question is governed by the same rules. When Sri Siddaveerappa pointed out that only three questions are being discussed, the members insisted that some more time should be allowed for those questions.

14
ಬೆಂಗಳೂರು. Bang
ದಿನಾಂಕ Date.....
ಕ್ರಮಾಂಕ No.....